# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 371 |
| ಸದಸ್ಯರ ಹೆಸರು | : | ಶ್ರೀ ವೈ.ಎಂ.ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 15.09.2022 |
| ಉತ್ತರಿಸುವ ಸಚಿವರು | : | ಮಾನ್ಯ ಜಲಸಂಪನ್ಮೂಲ ಸಚಿವರು |

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬಳ್ಳಾರಿ ಗ್ರಾಮಾಂತರ ಕ್ಷೇತ್ರದಲ್ಲಿ ಬರುವ ಕೆರೆಗಳಿಗೆ ಕುಡಿಯುವ ನೀರಿನ ಉದ್ದೇಶಕ್ಕಾಗಿ ಮಾಡಲಾಗಿರುವ ಹರಗಿನದೋಣಿ ಮತ್ತು ಇತರೆ ಗ್ರಾಮಗಳಿಗೆ ಕುಡಿಯುವ ನೀರಿನ ಯೋಜನೆಯು ಯಾವ ಹಂತದಲ್ಲಿದೆ: ಈ ಯೋಜನೆಯು ವಿಳಂಬವಾಗುತ್ತಿರಲು ಕಾರಣವೇನು; | 2019-20ನೇ ಸಾಲಿನ ಆಯವ್ಯಯದಲ್ಲಿ ರೂ.60.00 ಕೋಟಿ ವೆಚ್ಚದಲ್ಲಿ ಬಳ್ಳಾರಿ ಗ್ರಾಮಾಂತರ ಕ್ಷೇತ್ರಕ್ಕೆ ಒಳಪಡುವ ಕೆರೆಗಳನ್ನು ತುಂಬಿಸಿ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಯೋಜನೆ ಘೋಷಣೆಯಾಗಿರುತ್ತದೆ.<br><br>ಸದರಿ ಯೋಜನೆಯಡಿಯಲ್ಲಿ ಬಳ್ಳಾರಿ ತಾಲ್ಲೂಕಿನ ಹರಗಿನದೋಣಿ, ಜಾನಿಕುಂಟೆ, ಜಾನಿಕುಂಟೆ ತಾಂಡ ಗ್ರಾಮಗಳಿಗೆ ಕುಡಿಯುವ ನೀರನ್ನು ಒದಗಿಸುವ ಹಾಗೂ ಕಕ್ಕಬೇವಿನಹಳ್ಳಿ, ಅಸುಂಡಿ ಲಿಂಗದೇವನಹಳ್ಳಿ ಮತ್ತು ಸಿಂಧವಾಲ ಗ್ರಾಮಗಳಿಗೆ ಬ್ರಿಡ್ಜ್ ಕಂ ಬ್ಯಾರೇಜ್ ನಿರ್ಮಾಣ ಕಾಮಗಾರಿಯನ್ನು ಕೈಗೊಳ್ಳಲು ಯೋಜಿಸಲಾಗಿದ್ದು, ಪ್ರಸ್ತಾವನೆಯ ಯೋಜನಾ ವರದಿಯನ್ನು ದಿನಾಂಕ 10/12/2021 ರಂದು ಜರುಗಿದ ನಿಗಮದ 86ನೇ ಅಂದಾಜು ಪರಿಶೀಲನಾ ಸಮಿತಿ ಸಭೆಯಲ್ಲಿ ಮಂಡಿಸಲಾಗಿತ್ತು.<br><br>ಮುಂದುವರೆದು ಯೋಜನಾ ವರದಿಯಲ್ಲಿನ ಕೆಲವು ನ್ಯೂನತೆಗಳನ್ನು ಸರಿಪಡಿಸಿ, ರೂ.41.79 ಕೋಟಿ ಮೊತ್ತದ ವಿವರವಾದ ಯೋಜನಾ ವರದಿಗೆ ದಿನಾಂಕ 04/08/2022 ರಂದು ಜರುಗಿದ ಕರ್ನಾಟಕ ನೀರಾವರಿ ನಿಗಮದ 94ನೇ ಅಂದಾಜು ಪರಿಶೀಲನಾ ಸಮಿತಿ ಸಭೆಯಲ್ಲಿ ತೀರುವಳಿ ಪಡೆಯಲಾಗಿರುತ್ತದೆ.<br><br>ಸದರಿ ಪ್ರಸ್ತಾವನೆಯು ಕರ್ನಾಟಕ ನೀರಾವರಿ ನಿಗಮದ ಪರಿಶೀಲನೆಯಲ್ಲಿದ್ದು, ಅನುದಾನ ಲಭ್ಯತೆಗನುಸಾರ ಯೋಜನೆಯ ಕುರಿತು ನಿಯಮಾನುಸಾರ ಕ್ರಮ ವಹಿಸಲಾಗುವುದು. |
| ಆ) | ಈ ಯೋಜನೆಯು ದಿನಾಂಕ:10.12.2021ರ ಕರ್ನಾಟಕ ನೀರಾವರಿ ನಿಗಮದ ಇ.ಆರ್.ಸಿ.ಸಮಿತಿಯಲ್ಲಿ ಮುಂದೂಡಲಾಗಿದ್ದು, ಇದಕ್ಕೆ ಕಾರಣಗಳೇನು: ಇದಾದ ನಂತರ ಈ ವಿಷಯದಲ್ಲಿ ಉಂಟಾದ ಪ್ರಗತಿಯೇನು: (ವಿವರಗಳನ್ನು ನೀಡುವುದು) | |
| ಇ) | ಈ ಕುಡಿಯುವ ನೀರಿನ ಯೋಜನೆಯನ್ನು ಸರಿಪಡಿಸಿ ಯಾವ ಕಾಲಮಿತಿಯಲ್ಲಿ ಪ್ರಕ್ರಿಯೆಗಳನ್ನು ಮುಗಿಸಿ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು? (ಮಾಹಿತಿ ನೀಡುವುದು) | |

ಜಸಂಇ 142 ಎಂಎಲ್ಎ 2022

(ಗೋವಿಂದ ಎಂ.ಕಾರಜೋಳ)
ಜಲಸಂಪನ್ಮೂಲ ಸಚಿವರು